ಆ) ಹಾಗಿದ್ದಲ್ಲಿ ಗುತ್ತಿಗೆ ಒಪ್ಪಂದದ ಪ್ರಕಾರ ಕಾಮಗಾರಿಗಳನ್ನು ಯಾವಾಗ ಪ್ರಾರಂಭಿಸಲಾಗುವುದು ಹಾಗೂ ಮುಕ್ತಾಯಗೊಳಿಸಲಾಗುವುದು,

ಇ) ಗುತ್ತಿಗೆದಾರರ ವಿಳಂಬಕ್ಕೆ ಯಾವ ಕ್ರಮ ಕೈಗೊಳ್ಳಲಾಗುವುದು?

ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಹಾಗೂ ಇಂಧನ ಸಚಿವರು)

ಅ) ಬೆಳಗಾವಿ ಜಿಲ್ಲೆ ಕಿತ್ತೂರ ಮತ ಕ್ಷೇತ್ರದಲ್ಲಿ ನಬಾರ್ಡ್ ಯೋಜನೆಯಲ್ಲಿ ಮಂಜೂರಾದ ಬಾಗೇವಾಡಿ–ಬಸ್ಸಾಪೂರ–ಮೊದಗೆ ರಸ್ತೆ ಸುಧಾರಣೆ ಕಾಮಗಾರಿಯನ್ನು ಮೆ ಬಿನ್ ಕೋ ಕನ್‌ಸ್ಟ್ರಕ್ಷನ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರು ಇವರಿಗೆ ಗುತ್ತಿಗೆ ಆಧಾರದ ಮೇಲೆ ನೀಡಲಾಗುತ್ತದೆ ಗುತ್ತಿಗೆದಾರರು ಸದರಿ ಕಾಮಗಾರಿಯನ್ನು ಮಂದಗತಿಯಿಂದ ನಿರ್ವಹಿಸುತ್ತಿದ್ದಾರೆ

ಆ) ಗುತ್ತಿಗೆ ಒಪ್ಪಂದದ ಪ್ರಕಾರ ಸದರಿ ಕಾಮಗಾರಿಯನ್ನು ದಿನಾಂಕ 27 10 2005ರಲ್ಲಿ ಪ್ರಾರಂಭಿಸಿ ದಿನಾಂಕ 26 04 2006ರಂದು ಮಾಡಿ ಮುಗಿಸಬೇಕಾಗಿತ್ತು

ಇ) ಗುತ್ತಿಗೆದಾರರು ಕೆಲಸವನ್ನು ಮಂದಗತಿಯಿಂದ ನಿರ್ವಹಿಸುತ್ತಿದ್ದು ಗುತ್ತಿಗೆ ಕರಾರಿನ ಪ್ರಕಾರ ನಿಗದಿತ ಸಮಯದೊಳಗೆ ಪೂರ್ಣಗೊಳಿಸದ ಕಾರಣ ಸದರಿ ಗುತ್ತಿಗೆಯನ್ನು ಮೊಟಕುಗೊಳಿಸಿ ಮರು ಟೆಂಡರ್ ಕರೆಯಲು ಕ್ರಮ ಕೈಗೊಳ್ಳಲಾಗಿದೆ

455 (452) ಶ್ರೀ ಸೂರ್ಯನಾರಾಯಣ ರೆಡ್ಡಿ ಎನ್ (ಕುರುಗೋಡು)

ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ,

ಅ) 1997ರಲ್ಲಿ ಅಂಕೋಲ ಮತ್ತು ನೆಲ್ಲೂರ್‌ವರೆಗಿನ ರಾಷ್ಟ್ರೀಯ ಹೆದ್ದಾರಿಯನ್ನಾಗಿ ಎನ್‌ಹೆಚ್–63 ಮೇಲ್ದರ್ಜೆಗೆ ಏರಿಸಿರುವುದು ಸರ್ಕಾರಕ್ಕೆ ಗೊತ್ತಿದೆಯೇ,

ಆ) ಹಾಗಿದ್ದಲ್ಲಿ ಇಲ್ಲಿಯವರೆವಿಗೂ ಈ ರಾಷ್ಟ್ರೀಯ ಹೆದ್ದಾರಿಯನ್ನು ದುರಸ್ತಿಗೊಳಿಸದಿರಲು ಕಾರಣವೇನು,

ಇ) ದುರಸ್ತಿಗೊಳಿಸಿದ್ದಲ್ಲಿ, ಯಾವ ಸಾಲಿನಲ್ಲಿ ದುರಸ್ತಿಗೊಳಿಸಲಾಗಿದೆ ಮತ್ತು ದುರಸ್ತಿಗೊಳಿಸಿದ ದೂರ ಮತ್ತು ಅಂದಾಜು ಮೊತ್ತವೆಷ್ಟು?

ದುರಸ್ತಿ ಮತ್ತು ನಿರ್ವಹಣೆ ಶೀರ್ಷಿಕೆಯಡಿ ಬಿಡುಗಡೆಯಾದ ಅನುದಾನಕ್ಕೆ ಅನುಗುಣವಾಗಿ ಸಾಮಾನ್ಯ ದುರಸ್ತಿ ಕಾರ್ಯವನ್ನು ಕೈಗೊಳ್ಳಲಾಗಿದೆ ಭೂ ಸಾರಿಗೆ ಮಂತ್ರಾಲಯದಿಂದ ಅನುಮೋದನೆಯಾಗಿರುವ ಕಾಮಗಾರಿಗಳನ್ನು ಕಾರ್ಯಗತಗೊಳಿಸಲಾಗಿದೆ

ಇ) ಈ ರಾಷ್ಟ್ರೀಯ ಹೆದ್ದಾರಿಯನ್ನು 2004–05 ರಿಂದ 2006–07 ರವರೆಗೆ ಕೈಗೊಳ್ಳಲಾದ ಕಾಮಗಾರಿಗಳ ವಿವರಗಳನ್ನು ಅನುಬಂಧದಲ್ಲಿ ನೀಡಿದೆ

LAQ No 452
ANNEXURE
Details of Completed works

Sl No	NH No	Year of sanction	Name of work	Sanctioned cost in crores
1	63	2004-05	Improvement to Riding Quality from Km 210 to 220	2 04
2	63	2004-05	Improvement to Riding Quality from Km 358 00 to 370 600	3 38
3	63	2004-05	Improvement to Riding Quality from Km 240 to 250 & 253 10 to 255	2 12
4	63	2004-05	Improvement to Riding Quality from Km 255 to 267 60	2 27
5	63	2004-05	Improvement to Riding Quality from Km 140 to 158	3 40
6	63	2004-05	Reconstruction of Minor Bridge No 198/2at Km 197 830 of NH-63 of Ankola-Gooty Section	0 48
7	63	2004-05	Reconstruction of 21 nos culverts from Km 195 to 208	1 17
8	63	2004-05	Reconstruction of Minor Bridge No 196/1at Km 195/085 of NH-63 of Ankola-Gooty Section	0 34
9	63	2004-05	Reconstruction of Minor Bridge / culvert at km 191 650 & 193 950 on NH 63	1 04

10	63	2004-05	Reconstruction of Minor Bridge at KM 310/1 N H 63 of Ankola-Gooty Section	0 27
11	63	2004-05	Reconstruction of Culverts at KM 296/2, 309/2 and 317/1 of N H 63 Ankola-Gooty Section	0 50
12	63	2004-05	Periodical Renewals from Km 350 to 358	1 74
				18 75

456 (448) ಶ್ರೀ ವಿನಯ ಕುಲಕರ್ಣಿ (ಧಾರವಾಡ ಗ್ರಾಮೀಣ) ಮಾನ್ಯ ಸಾರಿಗೆ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ,

ಅ) ಧಾರವಾಡ ಗ್ರಾಮೀಣ ಮತ್ತು ಪಟ್ಟಣಗಳ ಎರಡೂ ಬಸ್ ಡಿಪೋಗಳಿಗೆ ಬೇರೆ ಬೇರೆ ವ್ಯವಸ್ಥಾಪಕರನ್ನು ನೇಮಿಸದೇ ಒಬ್ಬರೇ ವ್ಯವಸ್ಥಾಪಕರನ್ನು ಮುಂದುವರೆಸುತ್ತಿರುವ ಕಾರಣವೇನು,

ಆ) ಹಾಗಿದ್ದಲ್ಲಿ ಈ ಬಸ್ ನಿಲ್ದಾಣವನ್ನು ಹಳಿಯಾಳ ಡಿಪೋದಿಂದ ಧಾರವಾಡ ಡಿಪೋಗೆ ಸೇರಿಸಲು ಸರ್ಕಾರ ತಕ್ಷಣ ಕ್ರಮ ಕೈಗೊಳ್ಳುವುದೇ?

ಶ್ರೀ ಎನ್ ಚಲುವರಾಯಸ್ವಾಮಿ (ಸಾರಿಗೆ ಸಚಿವರು)

ಅ) ಪ್ರಸ್ತುತ ಧಾರವಾಡ ನಗರದಲ್ಲಿ, ಗ್ರಾಮೀಣ ಮತ್ತು ಪಟ್ಟಣಗಳ ಅನುಸೂಚಿಗಳನ್ನೊಳಗೊಂಡಂತೆ ಕಾರ್ಯಾಚರಣೆಯನ್ನು ಒಂದೇ ಘಟಕದಲ್ಲಿ ನಿರ್ವಹಿಸುತ್ತಿರುವುದರಿಂದ ಸದರಿ ಘಟಕಕ್ಕೆ ಹಿರಿಯ ಘಟಕ ವ್ಯವಸ್ಥಾಪಕರನ್ನು ನಿಯೋಜಿಸಲಾಗಿರುತ್ತದೆ

ಆ) ಸಾರ್ವಜನಿಕರ ಮತ್ತು ಜನ ಪ್ರತಿನಿಧಿಗಳ ಸಲಹೆ ಮೇರೆಗೆ ಈ ಬಸ್ ನಿಲ್ದಾಣದ ಉಸ್ತುವಾರಿಯನ್ನು ಕೇಂದ್ರ ಕಛೇರಿ ಆದೇಶ ಸಂಖ್ಯೆ 3486 ದಿನಾಂಕ 25 01 2007 ರನ್ವಯ ಕೂಡಲೇ ಜಾರಿಗೆ ಬರುವಂತೆ ಹುಬ್ಬಳ್ಳಿ ವಿಭಾಗದ ಧಾರವಾಡ ಘಟಕಕ್ಕೆ ವರ್ಗಾಯಿಸಲಾಗಿರುತ್ತದ

ಈ) ಈ ಬಗ್ಗೆ ಈಗಾಗಲೇ ಕ್ರಮ ಕೈಗೊಳ್ಳಲಾಗಿದೆ